## ಚಳ್ಳಕೆರೆ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಓ.ಎಸ್. 77/2014

**ವಾದಿಯರು** ವಿರುದ್ಧ **ಪ್ರತಿವಾದಿಯರು**

ಪಾಪಮ್ಮ ಮತ್ತು ಇನ್ನೊಬ್ಬರು ಚಿತ್ತಮ್ಮ ಮತ್ತು ಇನ್ನೊಬ್ಬರು

**ವಾದಿಯ ಪರ ಹಾಜರುಪಡಿಸಿದ ಮುಖ್ಯ ವಿಚಾರಣೆ ಪ್ರಮಾಣಪತ್ರದ ರೀತ್ಯಾ**

PW1

Civil Judge (Jr. Dn.) & J.M.F.C
CHALLAKERE.

ಹೆಸರು : ಪಾಪಮ್ಮ
ಗಂಡ : ಎಸ್.ಕೆ.ಸೂರಯ್ಯ
ವಯಸ್ಸು : ಸುಮಾರು 50 ವರ್ಷಗಳು,
ವೃತ್ತಿ : ಜಿರಾಯ್ತಿ,
ವಾಸ : ಕಾಟಪ್ಪನಹಟ್ಟಿ, ಚಳ್ಳಕೆರೆ ಟೌನ್.

Oath Commissioner
Court of the Civil Judge (Sr. Dn.) & JMFC, Challakere

ಪಾಪಮ್ಮ ಕೋಂ ಎಸ್.ಕೆ.ಸೂರಯ್ಯ, ಸುಮಾರು 50 ವರ್ಷಗಳು, ಜಿರಾಯ್ತಿ, ಕಾಟಪ್ಪನಹಟ್ಟಿ ವಾಸ, ಚಳ್ಳಕೆರೆ ಟೌನ್, ಚಳ್ಳಕೆರೆ ತಾಲ್ಲೂಕು ಆದ ನಾನು ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ,

1. ಚಳ್ಳಕೆರೆ ಟೌನ್, ಚಳ್ಳಕೆರೆ ಪುರಸಭಾ ಕಛೇರಿ ವ್ಯಾಪ್ತಿಗೆ ಒಳಪಟ್ಟಿರುವ ಕಾಟಪ್ಪನಹಟ್ಟಿಯಲ್ಲಿರುವ ಅಸೆಸ್‌ಮೆಂಟ್ ನಂ. 816/751ಎ/2737ಎ ನಿವೇಶನ ವಿಸ್ತೀರ್ಣ ಪೂ-ಪ: 19 ಅಡಿಗಳು ಮತ್ತು ಉ-ದ : 29 ಅಡಿಗಳುಳ್ಳ ಖಾಲಿ ನಿವೇಶನವಿದ್ದು, ಒಟ್ಟು ಭೂಮಿ ವಿಸ್ತೀರ್ಣ 551 ಚದುರ ಅಡಿಗಳು ಈ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಈ ದಾವಾವನ್ನು ಸಲ್ಲಿಸಿರುತ್ತೇನೆ.

2. ದಾವಾ ಷೆಡ್ಯೂಲ್ ಸ್ವತ್ತು ಸೂರಮ್ಮ ಕೋಂ ಲೇಟ್ ಪಾಲೆಪಾಪಯ್ಯ ಇವರ ಹೆಸರುಗಳಿಗೆ ಖಾತೆಯಿದ್ದು, ಇವರುಗಳ ಹಕ್ಕು, ಅಧಿಕಾರ, ಸ್ವಾಧೀನಾನುಭವಕ್ಕೆ ಒಳಪಟ್ಟಿದ್ದು, ಈ ಸದರಿ ನಿವೇಶನದಲ್ಲಿ ಈ ಮೊದಲು ವಾಸದ ಮನೆಯಿದ್ದು, ಸದರಿ ವಾಸದ ಮನೆಯಲ್ಲಿ ಸೂರಮ್ಮ

No of Corrections. Nil

Oath Commissioner
Court of the Civil Judge (Sr. Dn.) & JMFC,

ಮತ್ತು ನಾನು ಮತ್ತು ಜಯಮ್ಮ ಇವರು ವಾಸ ಮಾಡುತ್ತಾ ಬಂದವರಾಗಿದ್ದು, ಖಾತೆದಾರರಾದ ಸೂರಮ್ಮ ಇವರುಗಳು ಈಗ್ಗೆ ಸುಮಾರು 6 ವರ್ಷಗಳ ಹಿಂದೆ ನಿಧನ ಹೊಂದಿರುತ್ತಾರೆ. ಸೂರಮ್ಮಳ ನಿಧನದ ನಂತರ ಈ ಮನೆ ಅಂದರೆ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿರುವ ಮನೆ ಹಳೆಯದಾಗಿದ್ದ ಕಾರಣ ಪಾಳು ಬಿದ್ದಿದ್ದು, ಅದನ್ನು ಸ್ವಚ್ಛಗೊಳಿಸಿ, ಈಗ ದಾವಾ ಷೆಡ್ಯೂಲ್ ಸ್ವತ್ತನ್ನು ನಿವೇಶನವನ್ನಾಗಿ ಮಾಡಿಕೊಂಡಿರುತ್ತೇವೆ.

3. ದಾವಾ ಷೆಡ್ಯೂಲ್ ನಿವೇಶನವು ಖಾತೆದಾರರಾದ ಸೂರಮ್ಮ ಕೋಂ ಪಾಲೆಪಾಪಯ್ಯ ಇವರುಗಳ ಹಕ್ಕು, ಅಧಿಕಾರ, ಸ್ವಾಧೀನಾನುಭವದಲ್ಲಿದ್ದು, ಸದರಿ ಸೂರಮ್ಮ ಈಗ್ಗೆ ಸುಮಾರು 6 ವರ್ಷಗಳ ಹಿಂದೆ ನಿಧನದ ನಂತರ ಅವರ ಮಕ್ಕಳಾದ ನನ್ನ ಮತ್ತು ಜಯಮ್ಮಳ ಹಕ್ಕು, ಅಧಿಕಾರ ಮತ್ತು ಸ್ವಾಧೀನಾನುಭವಕ್ಕೆ ಒಳಪಟ್ಟಿರುತ್ತದೆ.

4. ದಾವಾ ಷೆಡ್ಯೂಲ್ ನಿವೇಶನವು ಈಗಲೂ ಹಾಲಿ ನಮ್ಮಗಳ ತಾಯಿಯಾದ ಮೃತ ಸೂರಮ್ಮ ಕೋಂ ಪಾಲೆಪಾಪಯ್ಯ ಇವರ ಹೆಸರಿಗೆ ಇರುತ್ತದೆ. ಸದರಿ ದಾವಾ ಷೆಡ್ಯೂಲ್ ನಿವೇಶನವನ್ನು ಸಂಬಂಧಪಟ್ಟ ಕಛೇರಿಯಲ್ಲಿ ನಮ್ಮಗಳ ಹೆಸರಿಗೆ ಇನ್ನು ವರ್ಗಾವಣೆ ಮಾಡಿಕೊಂಡಿರುವುದಿಲ್ಲ. ಖಾತೆದಾರ ಮೃತ ಸೂರಮ್ಮ ಇವರುಗಳ ಹೆಸರಿನಲ್ಲಿರುವ ದಾವಾ ಷೆಡ್ಯೂಲ್ ನಿವೇಶನಕ್ಕೆ ಅವರ ಮಕ್ಕಳಾದ ನಾವುಗಳೇ ಸಂಪೂರ್ಣ ಹಕ್ಕುದಾರರು, ಮಾಲೀಕದಾರರು ಮತ್ತು ಸ್ವಾಧೀನಾನುಭವದಾರರಾಗಿರುತ್ತೇವೆ.

5. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಋಣಾಭಾರಗಳು ಇರುವುದಿಲ್ಲ. ಕಾಲಕಾಲಕ್ಕೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಾವುಗಳು ಕಂದಾಯವನ್ನು ಪಾವತಿ ಮಾಡುತ್ತಾ ಬಂದವರಾಗಿರುತ್ತೇವೆ.

6. 1ನೇ ಪ್ರತಿವಾದಿ ಚಿತ್ತಮ್ಮ ಇವರಿಗೆ 2ನೇ ಪ್ರತಿವಾದಿ ಮಂಜುನಾಥ ಇವರು ಮಗನಾಬೇಕು. ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿನ ಕಡೆಗೆ ಪ್ರತಿವಾದಿಯರಾದ ಚಿತ್ತಮ್ಮ ಮತ್ತು ಮಂಜುನಾಥ ಇವರಿಗೆ

No of Corrections Nil

ಸೇರಿದ ಹಳೆಯ ವಾಸದ ಮನೆ ಇರುತ್ತದೆ. ಸದರಿ ಚಿತ್ತಮ್ಮರವರ ಹಳೆಯ ವಾಸದ ಮನೆಗೆ ಪಶ್ಚಿಮ ದಿಕ್ಕಿನ ಕಡೆ ಸಾರ್ವಜನಿಕ ರಸ್ತೆಯಿದ್ದು, ಹೀಗಾಗಿ ಚಿತ್ತಮ್ಮ ಇವರು ಅವರ ವಾಸದ ಮನೆಯ ಮುಂಬಾಗಿಲನ್ನು ಪಶ್ಚಿಮ ದಿಕ್ಕಿನ ಕಡೆ ಇಟ್ಟುಕೊಂಡಿರುತ್ತಾರೆ. ಪ್ರತಿವಾದಿಯರಾದ ಚಿತ್ತಮ್ಮ ಮತ್ತು ಮಂಜುನಾಥ ಇವರ ವಾಸದ ಮನೆ ಉತ್ತರ ದಿಕ್ಕಿನ ಕಡೆ ಸದರಿಯವರಿಗೆ ಸೇರಿದಂತಹ ಯಾವುದೇ ಖಾಲಿ ಜಾಗ ಇರುವುದಿಲ್ಲ. ಆದಾಗ್ಯೂ ಸಹ ಚಿತ್ತಮ್ಮ ಮತ್ತು ಮಂಜುನಾಥ ಇವರು ತಮ್ಮ ವಾಸದ ಹಳೆಯ ಮನೆಯನ್ನು ನೆಪದಲ್ಲಿ ನಮಗೆ ಸೇರಿದ ದಾವಾ ಷೆಡ್ಯೂಲ್ ನಿವೇಶನದಲ್ಲಿ ಒತ್ತುವರಿ ಮಾಡಿ, ಅಕ್ರಮವಾಗಿ ಕಟ್ಟಡ ಕಟ್ಟಲು ಯತ್ನಿಸುವುದರ ಮುಖೇನ ದಾವಾ ಷೆಡ್ಯೂಲ್ ಸ್ವತ್ತಿನ ನಮ್ಮಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ, ಆತಂಕ, ತೊಂದರೆ ಉಂಟು ಮಾಡಲು ಯತ್ನಿಸಿದ್ದು, ಈ ರೀತಿ ಮಾಡಬಾರದೆಂದು ನಾವುಗಳು ಚಿತ್ತಮ್ಮ ಮತ್ತು ಅವರ ಮಗನಿಗೆ ಬುದ್ದಿವಾದ ಹೇಳಿದಾಗ್ಯೂ ಸಹ ಸದರಿಯವರು ನಿರ್ಲಕ್ಷ್ಯ ಮಾಡಿರುತ್ತಾರೆ. ನಗರದ ಹಿರಿಯರ ಮುಖೇನ ಚಿತ್ತಮ್ಮ ಮತ್ತು ಅವರ ಮಗನಿಗೆ ತಿಳುವಳಿಕೆಯನ್ನು ಹೇಳಿದಾಗ್ಯೂ ಸಹ ಅವರುಗಳ ಮಾತನ್ನು ಸಹ ಸದರಿಯವರು ನಿರ್ಲಕ್ಷ್ಯ ಮಾಡಿರುತ್ತಾರೆ. ಹೀಗಾಗಿ ಚಿತ್ತಮ್ಮ ಮತ್ತು ಮಂಜುನಾಥ ಇವರ ಅಕ್ರಮ ಚಟುವಟಿಕೆಯನ್ನು ತಡೆಹಿಡಿಯಲು ಸಾಧ್ಯವಾಗದೇ ನಾವು ಸದರಿಯವರ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಶಾಶ್ವತ ನಿರೋದಾಜ್ಞೆಯನ್ನು ತಂದಿರುತ್ತೇವೆ.

7. ಈಗ್ಗೆ ಸುಮಾರು ಒಂದುವರೆ ವರ್ಷಗಳ ಹಿಂದೆ ನಮಗೆ ಸೇರಿದ ದಾವಾ ಷೆಡ್ಯೂಲ್ ನಿವೇಶನದಲ್ಲಿ ಚಿತ್ತಮ್ಮ ಮತ್ತು ಅವರ ಮಗ ತಮ್ಮ ಹಳೆಯ ವಾಸದ ಮನೆಯನ್ನು ರಿಪೇರಿ ಮಾಡುವ ನೆಪದಲ್ಲಿ ಅಕ್ರಮವಾಗಿ, ದೌರ್ಜನ್ಯದಿಂದ ನಮ್ಮಗಳ ದಾವಾ ಷೆಡ್ಯೂಲ್ ನಿವೇಶನವನ್ನು ಒತ್ತುವರಿ ಮಾಡಿ, ಮನೆಯನ್ನು ಕಟ್ಟಲು ಯತ್ನಿಸುವುದರ ಮುಖೇನ ದಾವಾ ಷೆಡ್ಯೂಲ್ ಸ್ವತ್ತಿನ ನಮ್ಮ ಶಾಂತಿಯುತ ಸ್ವಾಧೀನಾನುಭವಕ್ಕೆ ಅಡ್ಡಿ, ಆತಂಕ ಉಂಟು ಮಾಡಲು ಯತ್ನಿಸಿದ್ದರಿಂದ ನಾವು ಈ ದಾವಾವನ್ನು ಸಲ್ಲಿಸಿರುತ್ತೇವೆ.

No of Corrections. Nil

8. ದಾವಾ ಷೆಡ್ಯೂಲ್ ನಿವೇಶನ ಈಗಲೂ ಸೂರಮ್ಮ ಕೋಂ ಲೇಟ್ ಪಾಲೆ ಪಾಪಯ್ಯ ಇವರ ಹೆಸರಿಗೆ ಖಾತೆ ಇರುತ್ತದೆ. ಈಗ ಸಂಪೂರ್ಣ ಹಾಲಿ ಖಾಲಿ ನಿವೇಶನವನ್ನಾಗಿ ಮಾಡಿಕೊಂಡಿರುತ್ತೇವೆ. ಸದರಿ ನಿವೇಶನದಲ್ಲಿ ಯಾವುದೇ ರೀತಿಯ ಹಳೆಯ ಕಟ್ಟಡ ಇರುವುದಿಲ್ಲ. ಈ ಹಿಂದೆ ಈ ಕಟ್ಟಡದಲ್ಲಿ ಹಳೆಯ ಕಟ್ಟಡ ಇದ್ದ ಕಾರಣ ಖಾತೆ ನಕಲು ಕಾಪಿಯಲ್ಲಿಯೂ ಸಹ ಕಟ್ಟಡ ವಿಸ್ತೀರ್ಣವೆಂದೇ ತೋರಿಸಿದ್ದು, ಇದನ್ನು ನಾವುಗಳು ತಿದ್ದುಪಡಿ ಮಾಡಿಸಿರುವುದಿಲ್ಲ. ವಾಸ್ತವಿಕವಾಗಿ ಸದರಿ ದಾವಾ ಷೆಡ್ಯೂಲ್ ನಿವೇಶನದಲ್ಲಿ ಯಾವುದೇ ರೀತಿಯ ಕಟ್ಟಡ ಇರದೇ ಸಂಪೂರ್ಣ ನಿವೇಶನ ಮಾಡಿಕೊಂಡಿರುತ್ತೇವೆ. ಕಾಲಕಾಲಕ್ಕೆ ಈ ಸ್ವತ್ತಿಗೆ ನಾವೇ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತೇವೆ. ಈ ಸದರಿ ದಾವಾ ಷೆಡ್ಯೂಲ್ ನಿವೇಶನದ ಮೇಲೆ ನಮ್ಮಗಳ ವಿನಃ ಚಿತ್ತಮ್ಮಳಿಗಾಗಲೀ, ಅವರ ಮಗ ಮಂಜುನಾಥನಿಗಾಗಲೀ ಅಥವಾ ಬೇರೆ ಯಾರಿಗೇ ಆಗಲೀ ಯಾವುದೇ ರೀತಿಯ ಹಕ್ಕು, ಅಧಿಕಾರ, ಸ್ವಾಧೀನಾನುಭವ ಇರುವುದಿಲ್ಲ. ಈ ದಾವಾಕ್ಕೆ ಸಂಬಂಧಪಟ್ಟಂತೆ ನನ್ನ ಪರ ಸಲ್ಲಿಸಿರುವ ದಾಖಲಾತಿಗಳನ್ನು ನಿಶಾನೆ ದಾಖಲಾತಿಗಳನ್ನಾಗಿ ಗುರುತಿಸಬೇಕಾಗಿ ಪ್ರಾರ್ಥನೆ.

ಆದ್ದರಿಂದ ದಯವಿಟ್ಟು ಘನ ಸನ್ನಿಧಿ ನ್ಯಾಯಾಲಯವು ನ್ಯಾಯೋದ್ದೇಶದಿಂದ ನಾನು ಸಲ್ಲಿಸಿರುವ ದಾವಾದ ಪ್ರಾರ್ಥನೆಯಲ್ಲಿ ಕೇಳಿಕೊಂಡಿರುವ ಪ್ರಕಾರ ನನ್ನ ಪರವಾಗಿ ತೀರ್ಪು ಮತ್ತು ಡಿಕ್ರಿ ಮಾಡಬೇಕಾಗಿ ಘನ ಸನ್ನಿಧಿ ನ್ಯಾಯಾಲಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ, ಈ ಪ್ರಮಾಣ ಪತ್ರದ ಮೇಲಿನ ಹೆಸರು, ಕೆಳಗಿನ ಸಹಿ ಮತ್ತು ಎಲ್ಲಾ ಪ್ಯಾರಾಂಶಗಳು ನನಗೆ ಖುದ್ದು ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ನನ್ನಿಂದ ಗುರುತಿಸಲ್ಪಟ್ಟಿದೆ.

O.H. [signature]

ವಕೀಲರು.

[signature]

ಪ್ರಮಾಣೀಕರಿಸುವವರು

ಸ್ಥಳ: ಚಳ್ಳಕೆರೆ.

ದಿನಾಂಕ: 17.11.2015.

Oath Commissioner, Court of the Civil Judge (Sr. Dn.) & JMFC, Challakere

Solemnly affirmed / Sworn to before me this the 17th day of Nov 2015

Place Challakere [signature] Oath Commissioner

No of Corrections Nil

Total No. of Corrections Nil

ಓ.ಎಸ್.ನಂ. 77/2014, ಪಿ.ಡಬ್ಲ್ಯು. 01
ದಿನಾಂಕಃ-17.11.2015

<u>ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಒ.ಹೆಚ್.ಜೆ. ವಕೀಲರಿಂದ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

<u>ಮುಂದುವರೆದ ಮುಖ್ಯ ವಿಚಾರಣೆ ಃ-</u> ಸಮಯವನ್ನು ಕೋರಿದ್ದು ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ. ಸರಿಯಿದೆ.

17/11/15

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಚಳ್ಳಕೆರೆ.